

# ಆಲದ ಮರದ ಆಹ್ಲಾದ!

**ನೆನಪಿನಾಳದಲ್ಲಿ ಆಲದ ಮರದ ಬಿಳಲು ಬೇರೂರಿದೆ. ಆದು ಬೃಹತ್ ಆಲದ ಮರಗಳನ್ನು ನೋಡುವ ತವಕದ ಚಿಗುರನು ಬೆಳೆಸಿದೆ.**

■ ಡಿ.ಎನ್. ಶಾಲಿನಿ

ಮದ್ರಾಸಿನ (ಈಗಿನ ಚೆನ್ನೈ) ಅಡ್ಯಾರ್‌ನಲ್ಲಿರುವ ಥಿಯಾಸಫಿಕಲ್ ಸೊಸೈಟಿಯಲ್ಲಿ ದಕ್ಷಿಣ ಭಾರತದಲ್ಲಿಯೇ ದೊಡ್ಡದು ಎನ್ನಲಾದ ಒಂದು ಆಲದ ಮರವಿದೆ. ನನ್ನ ಪತಿ ಬಾಲಕರಾಗಿದ್ದಾಗ (1950ರ ದಶಕಗಳಲ್ಲಿ) ತಂದೆ– ತಾಯಿಗಳ ಜೊತೆ ಅಲ್ಲಿನ ಆಧ್ಯಾತ್ಮಿಕ ಗೋಷ್ಠಿಗಳಲ್ಲಿ ಭಾಗವಹಿಸಿ, ಆಲದ ಮರದ ಕೆಳಗೆ ವಿಶ್ವಾದ್ಯಂತ ಬಂದ ಸದಸ್ಯರಿಗೆ ಏರ್ಪಡಿಸಿದ್ದ ಭೋಜನ ವ್ಯವಸ್ಥೆಯ ಸವಿ ನೆನಪುಗಳನ್ನು ಹೇಳುತ್ತಿದ್ದರು.

ರಾಮನಗರದ ಹತ್ತಿರವೂ ಕರ್ನಾಟಕದಲ್ಲಿಯ ಅತಿ ದೊಡ್ಡ ಆಲದ ಮರವಿದೆ ಎಂದು ಗೊತ್ತಾದಾಗ ನನ್ನ ತಂದೆಯನ್ನು ಪುಸಲಾಯಿಸಿದೆ. ಅವರ ಕಾರಿನಲ್ಲಿ ನನ್ನ ಕುಟುಂಬ (ಇಬ್ಬರು ಮಕ್ಕಳೊಂದಿಗೆ) ಮತ್ತು ನನ್ನ ತಂಗಿಯ ಕುಟುಂಬ (ಅವಳಿಗೂ ಇಬ್ಬರು ಗಂಡು ಮಕ್ಕಳು) ಕೂಡಿಕೊಂಡು ಮಾರ್ಚ್ 1987ರಲ್ಲಿ (ಮೂವತ್ತೊಂದು ವರ್ಷಗಳ ಹಿಂದೆ) ಅಲ್ಲಿಗೆ ಹೊರಟೆವು. ತಲುಪಿದ ಮೇಲೆ, ಅದರ ಮನ ಸೆಳೆಯುವ ತಂಪಾದ ತಾಣದಲ್ಲಿ ಪುಳಕಿತಳಾದೆ!

ನನ್ನ ತಂದೆಯವರ ಜೊತೆ ಅನೇಕ ಅರಣ್ಯಧಾಮಗಳಲ್ಲಿ ಸಂಚರಿಸಿದ್ದ ನನಗೆ ಬೆಂಗಳೂರಿನ ಸಮೀಪವೇ ಇಂತಹ ನೂರಾರು ಕೊಂಬೆಗಳಿಂದ ಆವೃತಗೊಂಡ ಬೃಹತ್ ಮರದ ಹಸಿರು ಎಲೆಗಳ ತಂಪು ಮುದ ನೀಡಿತು. ಪಕ್ಕದಲ್ಲೇ ಇದ್ದ ಕೆ.ಎಸ್.ಟಿ.ಡಿ.ಸಿ. ಉಪಹಾರ ಗೃಹದಲ್ಲಿ ರುಚಿಕರ ತಿಂಡಿ ಸೇವಿಸಿದೆವು. (ನಾವು ಮತ್ತೆ ಈ ವರ್ಷ ಜನವರಿ ತಿಂಗಳಲ್ಲಿ ಇಲ್ಲಿಗೆ ನಮ್ಮ ಮೊಮ್ಮಗನೊಂದಿಗೆ ಭೇಟಿ ನೀಡಿದಾಗ ಈ ಉಪಹಾರ ಗೃಹ ಹತ್ತಿರದಲ್ಲಿ ಕಾಣಬರಲಿಲ್ಲ. ಆದರೆ ಹೊಸ ಕಟ್ಟಡಗಳು ಮತ್ತು ವ್ಯವಸ್ಥೆಗಳು ಕಂಡು ಬಂದವು.) ಮಕ್ಕಳಂತೂ ಕೊಂಬೆಗಳನ್ನು ಏರಿ, ಇಳಿದು ಹಾಗೂ ಜೋತಾಡಿ ಮನಃಪೂರ್ತಿ ಆಟವಾಡಿದರು. ಈಗ ಅವರು ಪರದೇಶಗಳಲ್ಲೂ ಮತ್ತು ಬೇರೆ ನಗರಗಳಲ್ಲಿಯೂ ವಾಸವಾಗಿದ್ದಾರೆ.

ಈ ಚೈತನ್ಯದಾಯಕ ಭೇಟಿಯಿಂದ ಸ್ಫೂರ್ತಿಗೊಂಡು ಚೆನ್ನೈಗೆ ಅಮೆರಿಕಾದ ವೀಸಾ ಪಡೆಯಲು ಹೋಗಿದ್ದಾಗ (2008ರಲ್ಲಿ) ಅಡ್ಯಾರ್‌ನಲ್ಲಿರುವ ದೊಡ್ಡ ಆಲದ ಮರಕ್ಕೂ ಭೇಟಿ ನೀಡಿದೆವು. ಆದರೆ ಅದು ಅನೇಕ ಕೊಂಬೆಗಳನ್ನು ಕಳೆದುಕೊಂಡಿದ್ದನ್ನು ಕಂಡು ನನ್ನ ಪತಿಗೆ ನಿರಾಶೆ ಉಂಟಾಯಿತು. ನಂತರ ತುಮಕೂರು ಜಿಲ್ಲೆಯ ಸಿರಾ ಊರಿನ ಹತ್ತಿರದ ದೊಡ್ಡ ಆಲದ ಮರವನ್ನೂ ನೋಡಿ ಬಂದೆವು. ಇದು ವಿಸ್ತಾರದಲ್ಲಿ ಕರ್ನಾಟಕದಲ್ಲಿ ಎರಡನೆ ಸ್ಥಾನದಲ್ಲಿದೆಯಂತೆ. ಇನ್ನೊಮ್ಮೆ ನಾವು ಕೋಲ್ಕತ್ತಾಗೆ ಹೋಗಿದ್ದಾಗ ಅಲ್ಲಿ ಭಾರತದಲ್ಲೇ ಅತಿ ದೊಡ್ಡ ಆಲದ ಮರ ಇದ್ದುದು ಗೊತ್ತಾಯಿತು. ಆದರೆ ಅದನ್ನು ನೋಡಲು ಅವಕಾಶ ಮಾಡಿಕೊಳ್ಳಲಾಗಲಿಲ್ಲ.

ಆಲದ ಮರಗಳು ಮಾನವ ಕುಲದ ವಂಶ ಪರಂಪರೆಯ ಸಂಕೇತಗಳಾಗಿ ಕಂಡು ಬರುತ್ತವೆ. ಅವು ನಮ್ಮ ಜೀವಿತದ ಚರಿತ್ರೆಯೊಂದಿಗೆ ಉಸಿರಾಡುತ್ತಿವೆ ಎಂಬ ಭಾವನೆ ಮೂಡಿಸುತ್ತವೆ! ರಾಮನಗರದ ಬಳಿ ಅಂತಹ ಆಲದ ಮರದ ನೆರಳಲ್ಲಿ ಸಮಯ ಕಳೆದ ನನ್ನ ಮೊದಲ ಅನುಭವ ಇಲ್ಲಿ ಫೋಟೋದಲ್ಲಿ ಸೆರೆ ಹಿಡಿಯಲಾಗಿದೆ. ಈ ಸುತ್ತಾಟದ ನೆನಪುಗಳು ನನ್ನ ಜೀವನದಲ್ಲಿ ಸದಾ ಹಸಿರಾಗಿವೆ. ■